# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5045/2024 ಫ್ರಾಸಾ-10

ಚಾಸಾ-06

ದಿನಾಂಕಃ 05-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಅಶ್ವಥನಾರಾಯಣ |
| **ತಂದೆಯ / ಗಂಡನ ಹೆಸರು** | ತಿಮ್ಮಯ್ಯ |
| **ವಯಸ್ಸು** | 38 |
| **ಉದ್ಯೋಗ** | ಪೊಟೋ ಗ್ರಾಫರ್ |
| **ವಾಸಸ್ಥಳ** | ರಾಯವಾರ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಬೈರೇನಹಳ್ಳಿ ಕ್ರಾಸ್ ಹತ್ತಿರ ಎನ್.ಟಿ.ಆರ್. ಬಾರ್ ಹತ್ತಿರ ಪೊಲೀಸರು ನನ್ನ ಸಹಿ ತೆಗೆದುಕೊಂಡಿರುತ್ತಾರೆ ನಿಪಿ-2ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿ ಜಾಗವನ್ನು ತೋರಿಸಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮು.ಮಾ-1 ಮತ್ತು ಇತರ ಸೀಲ್ ಆದ ಬಿಳಿ ಬಟ್ಟೆಯ ಪ್ಯಾಕ್ ನ ಮೇಲೆ ಅಂಟಿಸಿದ ಚೀಟಿಗಳಲ್ಲಿ ನನ್ನ ಸಹಿ ಇರುತ್ತದೆ. ನಿಪಿ-3 ರಿಂದ 6 ಪೊಟೋಗಳನ್ನು ತೋರಿಸಿದ್ದು ಸಾಕ್ಷಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ಪೊಟೋ ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ . ಸದರಿ ಪೊಟೋದಲ್ಲಿ ನಾನು, ಅನಿಲ್ ಕುಮಾರ್ , ಗೋವಿಂದರಾಜು ಇರುತ್ತಾರೆ ಆ ಸಮಯದಲ್ಲಿ ಗೋವಿಂದರಾಜು ರವರು ಯ್ಯಾಕೆ ಹಾಜರಿದ್ದರು ಮತ್ತು ಯ್ಯಾಕೆ ಪೊಟೋ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಕೈಯಲ್ಲಿ ಚಾಕು ಯ್ಯಾಕೆ ಹಿಡಿದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 23.05.2024 ರಂದು ಮಧ್ಯಾಹ್ನ 1-30 ರಿಂದ 2-30 ಗಂಟೆಗೆ ಎನ್.ಟಿ.ಆರ್. ಬಾರ್ ಅಂಡ್ ರೆಸ್ಟೋರೆಂಟ್ ನ ಮುಂಭಾಗದಲ್ಲಿ ಚಾಸಾ-1 ಹಾಜರಿದ್ದು ಇದೇ ಜಾಗದಲ್ಲಿ ಎರಡು ದಿನಗಳ ಹಿಂದೆ ರಾತ್ರಿ 9-45 ಗಂಟೆಗೆ 5 ಜನ ಆರೋಪಿತರು ತನ್ನನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಮಾಡುವ ಉದ್ದೇಶದಿಂದ ಬೀರ್ ಬಾಟಲಿನಿಂದ ತನ್ನ ತಲೆಗೆ ಹೊಡೆದ ಜಾಗ ಇದೇ ಎಂದು ತೋರಿಸಿದ್ದು ಸದರಿ ಜಾಗದಲ್ಲಿ ನಿಪಿ-2 ರಂತೆ ಪಂಚನಾಮೆ ಮಾಡಿ , ಪಂಚನಾಮೆ ಕಾಲಕ್ಕೆ ಬೀರ್ ಬಾಟಲು ಮತ್ತು ಚಾಸಾ-1 ರವರು ಹಾಜರುಪಡಿಸಿದ ಟೀ ಶರ್ಟ್ ನ್ನು ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡು ನನ್ನ ಸಹಿ ತೆಗೆದುಕೊಂಡರು ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಿಪಿ-3 ರಿಂದ 6 ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**